ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp. 103-106.**
**©*IIMRD*, Mysuru**
IIMRD JOURNALS

**www.iimrd.com**

# ಜನ್ನನ ಕಾವ್ಯಧರ್ಮದಲ್ಲಿ ವಿಧಿ

***ಭೋಜರಾಜ ಟಿ.ಎಸ್. ಮತ್ತು ಡಾ. ಶೋಭಾ ನಾಯಕ****

*ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
**ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

***ಸಾರಾಂಶ: (Abstract)***

*ಪ್ರಾಚೀನ ಕಾಲದಿಂದಲೂ ಸಾಹಿತ್ಯ ಕೃತಿಗಳು ಸಹೃದಯನ ಮಾನಸಿಕ ನೆಮ್ಮದಿಯ ತಂಗುದಾಣಗಳಾಗಿವೆ. ಆಧುನಿಕ ಕಾಲದಲ್ಲಿರುವ ಸಮೂಹ ಮಾಧ್ಯಮಗಳಾದ ರೇಡಿಯೋ, ದೂರದರ್ಶನ, ಜಂಗಮವಾಣಿ, ಗಣಕಯಂತ್ರ, ಅಂತರ್ಜಾಲ, ಜಾಲತಾಣಗಳ ಆವಿಷ್ಕಾರ ಪ್ರಾಚೀನ ಕಾಲದಲ್ಲಿ ಆಗಿರಲಿಲ್ಲ ಆದ್ದರಿಂದ ಎಲ್ಲಾ ಸಂಪರ್ಕಗಳು ತಾಳೆಗರಿ, ಭೂರ್ಜಪತ್ರ, ಮಣ್ಣು, ಕಲ್ಲು, ಚರ್ಮ, ತಾಮ್ರಪತ್ರ, ಕಾಗದ, ನೀಲಿ ಕಾಗದ, ಹಸ್ತಪ್ರತಿಗಳ ಮೂಲಕ ನಡೆಯುತ್ತಿದ್ದವು. ದಿನಪೂರ್ತಿ ದುಡಿದು ಸಂಜೆಯ ವೇಳೆಗೆ ಅಲ್ಪ ಮನಃಶಾಂತಿಗಾಗಿ ಸಾಹಿತ್ಯ ಕೃತಿಗಳನ್ನು ಓದುವುದು ಸಾಮಾನ್ಯ ಜನರ ಹವ್ಯಾಸವಾಗಿತ್ತು. ಪುರಾಣ ಪ್ರವಚನಗಳು ನೊಂದ ಮನಸ್ಸುಗಳಿಗೆ ಸಾಂತ್ವನ ನೀಡಿ ಸನ್ಮಾರ್ಗದ ಜೀವನ ನಡೆಸಲು ಪ್ರಚೋದನೆ ನೀಡುತ್ತಿದ್ದವು ಅಲ್ಲದೆ ಪ್ರಾಚೀನ ಕಾಲದಲ್ಲಿ ರಚನೆಯಾದ ಸಾಹಿತ್ಯ ಕೃತಿಗಳು ಸಹೃದಯನ ಮಾನಸಿಕ ನೆಮ್ಮದಿಯ ಜೊತೆಗೆ ಅವನ ಮನೋಪರಿವರ್ತನೆಯನ್ನು ಮಾಡುತ್ತಿದ್ದವು. ಈ ಲೇಖನದಲ್ಲಿ ಜನ್ನನ ಕಾವ್ಯಧರ್ಮದಲ್ಲಿನ ವಿಧಿಯ ಕುರಿತು ಅವಲೋಕಿಸಲಾಗಿದೆ.*

***ಮುಖ್ಯಪದಗಳು: (Keywords)*** *ಕನ್ನಡ ಸಾಹಿತ್ಯ, ಜನ್ನ, ಧರ್ಮ, ಕಾವ್ಯಧರ್ಮ, ವಿಧಿ.*

**ಪೀಠಿಕೆ**

ಜೈನ ಪಂಡಿತ ಕವಿಗಳು ಹಿಂದೂ ಧರ್ಮದ ರಾಜಾಶ್ರಯದಲ್ಲಿದ್ದು, ತಮ್ಮ ಧರ್ಮದ ಸ್ವಾಭಿಮಾನದಿಂದ ಹಿಂಸೆ ಸುಖ ವೈಭೋಗದಲ್ಲಿ ಮುಳುಗಿರುವ ಮನಸ್ಸುಗಳನ್ನು ಪರಿವರ್ತಿಸುವ ಉದ್ದೇಶದಿಂದ ಲೌಕಿಕ ಇಂದ್ರೀಯ ಸುಖಗಳಲ್ಲಿ ಮನಕ್ಲೇಶ ತಂದು ಜೈನ ಧರ್ಮದ ತತ್ವ ಬೋಧನೆಗಳನ್ನು ಸಾರುವ ಲೌಕಿಕ ಮತ್ತು ಅಲೌಕಿಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಈ ಸಾಹಿತ್ಯ ಕೃತಿಗಳು ಕವಿಯ ಮನೋಧರ್ಮದ ಮುಖವಾಗಿ ಪ್ರತಿಬಿಂಬಿಸುತ್ತಿವೆ. ಮನಸ್ಸನ್ನು ಧರ್ಮದಲ್ಲಿ ನೆಲೆಗೊಳಿಸುವ ದೃಷ್ಟಿಯಿಂದ ಧರ್ಮ, ಕರ್ಮ, ದೇವರುಗಳಂತಹ ಅಂಶಗಳನ್ನು ತಂದು ಕೆಲವು ಸಂದಿಗ್ಧ ಪರಿಸ್ಥಿತಿಯಲ್ಲಿ ಕವಿಗಳಿಗೆ ಏನು ಹೇಳಬೇಕು ಎಂದು ತೋಚದಿರುವಾಗ ವಿಧಿಯನ್ನು ಹೊಣೆಗಾರನನ್ನಾಗಿ ಮಾಡಿಬಿಡುತ್ತಾರೆ. ಹೀಗೆ ಕವಿಗಳು

*Please cite this article as: ಭೋಜರಾಜ ಟಿ.ಎಸ್. ಮತ್ತು ಡಾ. ಶೋಭಾ ನಾಯಕ.* (2023). ಜನ್ನನ ಕಾವ್ಯಧರ್ಮದಲ್ಲಿ ವಿಧಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 103–106.*

ಸಂದಿಗ್ಧ ಪರಿಸ್ಥಿತಿಗಳಿಂದ ನಾಜೂಕ್ಕಾಗಿ ಜಾರುವುದಕ್ಕೋ ಅಥವಾ ತನ್ನ ಕಾವ್ಯೋದ್ದೇಶವನ್ನು ಈಡೇರಿಸುವುದಕ್ಕೋ ಯಾರು ಪ್ರಶ್ನಿಸದ ವಿಧಿಯ ಪರಿಕಲ್ಪನೆಯನ್ನು ತಂದಿದ್ದಾನೆ.

ಪ್ರಾಚೀನ ಕಾಲದಲ್ಲಿ ಹೊರಬಂದ ಶಾಸನ, ಹಸ್ತಪ್ರತಿಗಳ ಆದಿಯಲ್ಲಿಯೇ ಮನಸ್ಸನ್ನು ಮೃದು ಮಾಡಿ ಹದಗೊಳಿಸುವ ದೃಷ್ಟಿಯಿಂದ ದೇವರಸ್ತುತಿಗಳನ್ನು ತಂದಿರುವುದು ಗಮನಾರ್ಹ ಸಂಗತಿಯಾಗಿದೆ. ಧರ್ಮ ಧರ್ಮಗಳ ನಡುವೆ ತಮ್ಮ ಧರ್ಮದ ಅಸ್ತಿತ್ವಕ್ಕಾಗಿ ಹೋರಾಡುವ ಸೈದ್ಧಾಂತಿಕ ಹೋರಾಟಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆ. ರಾಜರು ತನ್ನ ಶೌರ್ಯ ಮತ್ತು ಸೇನಾಶಕ್ತಿಯಿಂದ ಆಕ್ರಮಿಸಿದ ರಾಜ್ಯದ ಜನತೆಯನ್ನು ಇಚ್ಛಾ ಪೂರ್ವಕವಾಗಿ, ಇಲ್ಲವೇ ವೈವಾಹಿಕ ಸಂಬಂಧದಿಂದಲೋ ಅಥವಾ ಬಲವಂತವಾಗಿಯೋ ತನ್ನ ಧರ್ಮವನ್ನು ಅನುಸರಿಸುವಂತೆ ಮಾಡುತ್ತಿದ್ದರು. ಇದು ಬಲ ಪ್ರದರ್ಶನದಿಂದಾಗುವ ಮತಾಂತರ. ಇದಕ್ಕೆ ಪ್ರತಿಯಾಗಿ ಯಾವುದೇ ರೀತಿಯ ಬಲ ಪ್ರದರ್ಶನವಿಲ್ಲದೆ ಸಾಹಿತ್ಯದ ಮೂಲಕ ಮನಃ ಪರಿವರ್ತನೆಯನ್ನು ಮಾಡಿ ಧರ್ಮವನ್ನು ಅನುಸರಿಸುವಂತೆ ಮಾಡುವಲ್ಲಿ ಪ್ರಾಚೀನ ಕವಿಗಳು ತಮ್ಮದೇ ಆದ ಸ್ವೋಪಜ್ಞತೆಯನ್ನು ಮೆರೆದಿದ್ದಾರೆ. ಆದ್ದರಿಂದಲೇ ಕೃತಿಗಳ ಆದಿಯಲ್ಲಿ ದೇವರ ಸ್ತುತಿಯನ್ನು ತಂದು, ಸಹೃದಯನ ಮನಸ್ಸನ್ನು ಹದ ಮಾಡಿ ಅದರಲ್ಲಿ ತನ್ನ ಧರ್ಮದ ಅಚ್ಚನ್ನು ಹೊತ್ತುತ್ತಿದ್ದರು. ಧರ್ಮ ಮತ್ತು ಧರ್ಮಗಳ ನಡುವೆ ಎದುರಾಗುವ ಸಂದಿಗ್ಧ ಪರಿಸ್ಥಿತಿಯ ಸಮಯದಲ್ಲಿ ಕವಿ ತನ್ನ ಸಮಯ ಪ್ರಜ್ಞೆಯಿಂದ ವಿಧಿಯನ್ನು ತಂದು ಚ್ಯುತಿ ಉಂಟಾಗುವ ಎಲ್ಲವುಗಳಿಗೂ ವಿಧಿಯ ಹೊಣೆಗಾರಿಕೆಯ ಹಣೆಪಟ್ಟಿಯನ್ನು ಕಟ್ಟಿದ್ದಾನೆ. ಮುಂದೆ ಅದೇ ವಿಧಿಯಿಂದ ಉಂಟಾಗುವ ಮನಕ್ಲೇಶದಿಂದ ತನ್ನ ಧರ್ಮದ ತತ್ವಗಳತ್ತ ಮನಸ್ಸು ಜಾರುವಂತೆ ಮಾಡುವುದೇ ಕವಿ ಕಾವ್ಯದಲ್ಲಿ ಮಾಡಿದ ಪ್ರಜ್ಞಾಪೂರ್ವಕ ನಡೆಯಾಗಿದೆ. ಇಂತಹ ಕವಿ ಪ್ರತಿಭೆಗಳು ಪ್ರಾಚೀನ ಕಾಲದ ಸಾಹಿತ್ಯ ಕೃತಿಗಳಲ್ಲಿ ಎದ್ದು ಕಾಣುತ್ತವೆ. ಟಿ.ಎಸ್. ವೆಂಕಣ್ಣಯ್ಯನವರು "ಬಹುಶಃ ಬೌದ್ಧರೇ ಕನ್ನಡ ಭಾಷೆಗೆ ಆದಿಕವಿಗಳು"[1] ಎನ್ನುವ ಮಾತು ಸಮ್ಮತವಾದುದೇ ಆಗಿದೆ. ಕನ್ನಡ ಭಾಷೆಯನ್ನು ಮೂಲತಃ ಯಾರು ಬಳಸಿದರು ಎನ್ನುವ ಇತಿಹಾಸವನ್ನು ಕೆದುಕುತ್ತಾ ಹೋದರೆ ಗೋವಿಂದ ಪೈ ಹೇಳಿರುವ ಹಾಗೆ ಅದು ಗ್ರೀಕ್ ದೇಶದವರೆಗೂ ವಿಸ್ತರಿಸುತ್ತಾ ಹೋಗುತ್ತದೆ. ಆದರೆ ಅವುಗಳಿಗೆ ಸರಿಯಾದ ಆಧಾರಗಳು ಸಿಗುವುದಿಲ್ಲವಷ್ಟೇ. ಅದೇನೇ ಆದರೂ ಕ್ರಿ..ಶ. 450ರ ಹಲ್ಮಿಡಿ ಶಾಸನದಿಂದ ಕನ್ನಡ ಭಾಷೆ ಬಳಕೆಯಾಗಿರುವುದಕ್ಕೆ ಸಾಕ್ಷಿ ಸಿಗುತ್ತದೆ. ಇದರ ಆದಿ ಭಾಗದಲ್ಲಿರುವ "ಜಯತು ಶ್ರೀ ಪರಿಷ್ವಙ್ಗ ಶ್ಯಾರ್ಙ್ಗ(ಮ್ಯಾನತಿ) ರಚ್ಯುತಃ"[2] ಎನ್ನುವ ಶ್ರೀ ವೈಷ್ಣವರ ದೇವರಾದ ವಿಷ್ಣುವಿನ ಸ್ತುತಿ ಬರುತ್ತದೆ. ಮುಂದೆ ಭಕ್ತಿಯಿಂದಲೋ, ಭಯದಿಂದಲೋ ಅಥವಾ ಪ್ರಚಾರದ ಹಠದಿಂದಲೋ ಶಾಸನಗಳಲ್ಲಿ ಮಾತ್ರವಲ್ಲ ಸಾಹಿತ್ಯ ಕೃತಿಗಳಲ್ಲಿಯೂ ದೇವರ ಸ್ತುತಿಗಳನ್ನು ಬರೆಯಲು ಆರಂಭಿಸಿದರು. ಉದಾಹರಣೆಗೆ ಕನ್ನಡದ ಮೊದಲ ಗ್ರಂಥ ಕವಿರಾಜಮಾರ್ಗದ ಮೊದಲ ಪರಿಚ್ಛೇದದಲ್ಲಿ ವಿಷ್ಣುವಿನ ಸ್ತುತಿ ಬರುವುದನ್ನು ಗಮನಿಸಬಹುದು. ಮುಂದೆ ಕವಿರತ್ನತ್ರಯರನ್ನು ಒಳಗೊಂಡಂತೆ ಕವಿ ಚಕ್ರವರ್ತಿಗಳಲ್ಲಿಯೂ ಈ ಪದ್ಧತಿ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದು.

ಹತ್ತನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ರಾರಾಜಿಸುತ್ತಿದ್ದ ಜೈನ ಧರ್ಮ 12ನೆಯ ಶತಮಾನದಷ್ಟೊತ್ತಿಗೆ ವೀರಶೈವ ಧರ್ಮದ ಶರಣರ ವಚನಗಳ ಎದುರು ತನ್ನ ಛಾಪನ್ನು ಕಳೆದು ಕೊಳ್ಳತೊಡಗಿತ್ತು. 13ನೇ ಶತಮಾನದಲ್ಲಿ ಇದನ್ನು ಗಮನಿಸಿದ ಕವಿಚಕ್ರವರ್ತಿ ಜನ್ನನು ಮತ್ತೆ ತನ್ನ

ಧರ್ಮವನ್ನು ಉತ್ತುಂಗ ಶಿಖರಕ್ಕೇರಿಸಲು ಲೌಕಿಕ ಜೀವನದಲ್ಲಿ ಮಾನವನ ಮನಸ್ಸಿಗೆ ಮತ್ತು ಇಂದ್ರಿಯಗಳಿಗೆ ಸುಖವನ್ನು ಕೊಡುವ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳನ್ನು ಬಳಸಿ ತನ್ನ ಕೃತಿಗಳನ್ನು ಜನ ಸಾಮಾನ್ಯರಿಗೆ ಅರ್ಥವಾಗುವಂತೆ ರಚಿಸಿದ್ದಾನೆ. 'ಯಶೋಧರ ಚರಿತೆ' ಮತ್ತು 'ಅನಂತನಾಥ ಪುರಾಣ'ದಲ್ಲಿ ವಿಷಮ ದಾಂಪತ್ಯ, ನಿಷಿದ್ಧ ಕಾಮದ ವರ್ಣನೆಗಳನ್ನು ತಂದು ಅಂತಿಮವಾಗಿ ಜೈನ ಧರ್ಮದ ತತ್ವಗಳ ಮೂಲಕ ಕಾವ್ಯದ ಪಾತ್ರಗಳಿಗೆ ಮೋಕ್ಷ ಕೊಡಿಸುವ ಕವಿಯ ಉದ್ದೇಶ ಜೈನ ಧರ್ಮದ ಪ್ರಚಾರ ಜೊತೆಗೆ ಸಹೃದಯನ ಮನಸ್ಸಿನಲ್ಲಿ ಜೈನ ಧರ್ಮದ ತತ್ವಗಳನ್ನು ಬಿತ್ತುವುದಾಗಿದೆ.

ಜನ್ನನ ಜನಪ್ರಿಯ ಕೃತಿಯಾದ 'ಯಶೋಧರ ಚರಿತೆ'ಯನ್ನು ಅವಲೋಕಿಸಿದಾಗ ಎಂತವರ ಮನಸ್ಸು ಸಹ ಒಂದು ಕ್ಷಣ ಭಾವುಕತೆಗೆ ಒಳಗಾಗಿ ನಿಲ್ಲುತ್ತದೆ. ಇದಕ್ಕೆ ಕಾರಣ ಲೌಕಿಕ ಜೀವನದಲ್ಲಿರುವ ಸಾಮಾನ್ಯ ಜನರ ಮನಸ್ಸಿನ ಅಗತ್ಯ ಅಂಶಗಳೊಂದಿಗೆ ಕಾವ್ಯ ವ್ಯವಹಾರಿಸುವುದೇ ಆಗಿದೆ. ಕವಿ ಕಾವ್ಯದಲ್ಲಿ ಧರ್ಮದ ದಿಗ್ವಿಜಯ ಸಾಧಿಸಲು ವಿಧಿಯ ಮೊರೆ ಹೋಗಿದ್ದಾನೆ. ಕಾವ್ಯದಲ್ಲಿ ಬರುವ ಎಲ್ಲಾ ಪಾತ್ರಗಳು ವಿಧಿಗೆ ಶರಣಾಗಿ ತಾವು ಕೈಗೊಂಡ ಹೀನ ಕೃತ್ಯಗಳಿಗೆ ಪಶ್ಚಾತ್ತಾಪ ಪಟ್ಟು ನೋವುಂಡು ಮೋಕ್ಷ ಸಾಧಿಸುತ್ತವೆ. ಮತ್ತೆ ಕೆಲವು ತಮ್ಮ ಸದೃಢವಾದ ನಿರ್ಧಾರಗಳನ್ನು ಬದಲಿಸದೆ ಇಹದಲ್ಲಿಯೇ ನರಕದ ಸುಖ–ದುಃಖಗಳನ್ನುಂಡು ಕಾಣದ ನರಕಕ್ಕೆ ಪ್ರಾಪ್ತವಾಗುವಂತೆ ಮಾಡಿರುವುದು ಕವಿಯ ಪ್ರಜ್ಞಾ ಪೂರ್ವಕವಾದ ನಡೆಯಾಗಿದೆ.

ಕಾವ್ಯದಲ್ಲಿನ ಪಾತ್ರಗಳ ಮಹತ್ವದ ನಡೆಯಲ್ಲಿ ಕವಿ ತನ್ನ ಪ್ರತಿಭೆಯನ್ನು ಬಳಸಿ ಅನ್ಯ ಧರ್ಮಗಳ ಮೌಢ್ಯ ಪದ್ಧತಿಗಳನ್ನು ತನ್ನ ಕಾವ್ಯದ ಉದ್ದೇಶಕ್ಕೆ ಅಸ್ತ್ರವನ್ನಾಗಿ ಮಾಡಿಕೊಂಡು ವಿಧಿ ಎಂಬ ಕುದುರೆಯನ್ನ ಹತ್ತಿ ತನಗೆ ಬೇಕಾದ ಕಡೆ ಕುದುರೆಯನ್ನು ತಿರುಗಿಸುತ್ತಾ, ಜೈನ ಧರ್ಮದ ದಿಗ್ವಿಜಯವನ್ನು ಸಾಧಿಸಿದ್ದಾನೆ. ಕಾವ್ಯದ ಮಹತ್ವದ ನಿರ್ಣಯಗಳಲ್ಲಿ ವಿಧಿಯನ್ನು ಹೊಣೆಗಾರನನ್ನಾಗಿ ಮಾಡಿದ್ದಾನೆ. ಕಾವ್ಯದ ಆರಂಭದಲ್ಲಿ ಬರುವ "ನಿಯತಿಯಾನರ್ ಮೀರಿದಪರ್"[3]ಎಂಬ ಮಾತು ಸಹೃದಯನ್ನು ಕಾವ್ಯದ ಜೊತೆ ಕವಿಯ ಉದ್ದೇಶವನ್ನು ಮೌನವಾಗಿಯೇ ಒಪ್ಪಿ ಮುಂದೊಂದುವಂತೆ ಮಾಡಿ ಬಿಡುತ್ತದೆ. ಮುಂದೆ ಬರುವ ಭಯ ಮತ್ತು ತಪಸ್ಸುಗಳ ಬಗ್ಗೆ ಸರಿಯಾದ ಅರ್ಥ ಕೊಟ್ಟ ಕವಿ ವಿಧಿಯ ಬಗ್ಗೆ ಅರ್ಥವನ್ನು ಸ್ಪಷ್ಟವಾಗಿ ಕೊಡದೆ ಕಾವ್ಯದ ಅಂತ್ಯದವರೆಗೂ ವಿಧಿಯನ್ನು ತನ್ನ ಧರ್ಮದ ದಿಗ್ವಿಜಯಕ್ಕೆ ಅಸ್ತ್ರ ಮಾಡಿಕೊಂಡಿದ್ದಾನೆ.

ಅವಂತಿ ರಾಜ್ಯವನ್ನು ಆಳ್ವಿಕೆ ಮಾಡುತ್ತಿದ್ದ ಯಶೌಘ ತನ್ನ ಅಂಗ ಸೌಂದರ್ಯದಿಂದ ಮೆರೆದು ಪ್ರಣಯದಲ್ಲಿ ಮುಳುಗಿದ್ದ ನಂತರ ಯಶೋಧರನು ಪ್ರಾಯಕ್ಕೆ ಬಂದಾಗ ಅವನಿಗೆ ಪಟ್ಟಕಟ್ಟಿ ತಾನು ಸಂಪೂರ್ಣ ಸುಧೀರ್ಘಕಾಲ ಅಂಗಭೋಗ ಸುಖಗಳಲ್ಲಿ ಮುಳುಗಿರುತ್ತಾನೆ. ಮಗ ಪ್ರಾಯಕ್ಕೆ ಬಂದರು ಯಶೌಘನಿಗೆ ಸುಖ ಭೋಗಗಳಲ್ಲಿ ತೃಪ್ತಿ ಆಗಿರಲಿಲ್ಲ ಆದರೆ ಏಕಾಏಕಿಯಾಗಿ ಒಂದು ಕ್ಷುಲ್ಲಕ ಕಾರಣಕ್ಕೆ ಅವನೊಳಗೆ ಜೀವನದಲ್ಲಿ ಜಿಗುಪ್ಸೆ ತಂದು ವೈರಾಗ್ಯಕ್ಕೆ ತಿರುಗುವಂತೆ ಮಾಡಿರುವುದು ಕವಿಯ ಪ್ರಜ್ಞಾಪೂರ್ವಕ ಕಾವ್ಯದ ನಡತೆಯಾಗಿದೆ. ಮುಂದೆ ಅನುವಂಶಿಯತೆಯಿಂದಲೋ ಅಥವಾ ಸುತ್ತಲಿನ ಪರಿಸರದಿಂದಲೋ ಯಶೋಧರನನ್ನು ಸಹ ಅತಿಯಾದ ಕಾಮದ ಭೋಗದಲ್ಲಿ ಮುಳುಗಿರುವುದು ಕಾವ್ಯದ ಅವಲೋಕನದಿಂದ ತಿಳಿಯುತ್ತದೆ.

ಚಂದ್ರಮತಿ ಯಶೌಘನ ವೈರಾಗ್ಯದಿಂದ ಕಂಗೆಟ್ಟು ಹೋಗಿ ಕೊನೆಗೆ ತನ್ನ ಮಗನ ಮೇಲೆ ಹೊಂದಿದ ಅತಿಯಾದ ಮೋಹ, ಯಶೋಧರನ್ನು ಅಮೃತಮತಿಯ ಮೇಲೆ ಹೊಂದಿದ ದಾಹ, ಅಮೃತಮತಿಗೆ ಸಂಗೀತದ ಮಾವುತನ ಮೇಲೆ ಹೊಂದಿದ ಅಪೇಕ್ಷೆ, ಮಾವುತನಿಗೆ ಅಮೃತಮತಿಯ ಮೇಲಿರುವ ಅಭೀಪ್ಸೆ, ಅವಳಿಗಾಗಿ ಮಧ್ಯರಾತ್ರಿಯವರೆಗೂ ಕಾಯುವ ಅವನ ಆ ಉತ್ಕಟವಾದ ಬಯಕೆಗಳಲ್ಲಿ ಕವಿ ಕಾಮದ ಕಲ್ಪನೆಗಳನ್ನು ತಂದಿದ್ದಾನೆ. ತಮ್ಮ ಮೋಹ ದಾಹಗಳು ಸಿಗದ ಪಾತ್ರಗಳಿಗೆ ಜೈನ ಧರ್ಮದ ತತ್ವಗಳನ್ನು ಕೊಟ್ಟು ಮೋಕ್ಷಕ್ಕೆ ದಾರಿ ತೋರಿದರೆ, ಲೌಕಿಕದಲ್ಲಿ ತಾವು ಬಯಸಿರುವ ನಿರೀಕ್ಷೆಯ ಬಯಕೆಗಳು ಸಿಗುವ ಪಾತ್ರಗಳಿಗೆ ಇಹದಲ್ಲಿಯೇ ಅತಿ ಸುಖ, ಅತಿ ನೋವುಗಳನ್ನು ಕೊಟ್ಟು ಕೊನೆಗೆ ನರಕಕ್ಕೆ ಪ್ರಾಪ್ತವಾಗುವಂತೆ ಕಾವ್ಯವನ್ನು ಕಟ್ಟಿದ್ದಾನೆ.

**ಕೊನೆ ಟಿಪ್ಪಣಿಗಳು**


1. ಚಿದಾನಂದಮೂರ್ತಿ ಎಂ. (2010). *ಹೊಸತು ಹೊಸತು.* ಸಪ್ನ ಬುಕ್‌ಹೌಸ್, ಬೆಂಗಳೂರು. ಪು.211.
2. ಹಿರೇಮಠ ಆರ್.ಸಿ. ಮತ್ತು ಎಂ.ಎಂ ಕಲಬುರ್ಗಿ. (ಸಂ.) (1995). ಕನ್ನಡ ಶಾಸನ ಸಂಪದ. ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು. 1.
3. ಪದ್ಮಪ್ರಸಾದ್ ಎಸ್.ಪಿ. (2018). ಜನ್ನ ಕವಿಯ ಯಶೋಧರ ಚರಿತೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಪು–41.